# ಆಯುಷ್ ಇಲಾಖೆ

# ಜಿಲ್ಲಾ ಪಂಚಾಯಿತಿ,

# ಚಿಕ್ಕಮಗಳೂರು – 577102

## ಮಾಹಿತಿ ಪಡೆಯಲು ಕೇಂದ್ರಿಯ ಹಕ್ಕು ಅಧಿನಿಯಮ – 2005

# ಆಯುಷ್ ಇಲಾಖೆ
# ಜಿಲ್ಲಾ ಪಂಚಾಯಿತಿ,
# ಚಿಕ್ಕಮಗಳೂರು – 577102

## ಮಾಹಿತಿ ಪಡೆಯಲು ಕೇಂದ್ರೀಯ ಹಕ್ಕು ಅಧಿನಿಯಮ – 2005

ಸೆಕ್ಷನ್ 4(1)(ಎ) ಪ್ರಕಾರ ಜಿಲ್ಲಾ ಪಂಚಾಯಿತಿ, ಜಿಲ್ಲಾ ಆಯುಷ್ ಅಧಿಕಾರಿಗಳ ಕಛೇರಿ, ಚಿಕ್ಕಮಗಳೂರು ವ್ಯಾಪ್ತಿಯ ಕಾರ್ಯಕ್ರಮಗಳು ಹಾಗೂ ಇನ್ನಿತರೆ ಮಾಹಿತಿಗಳನ್ನು ಗಣಕೀಕರಿಸಿ ಚಿಕ್ಕಮಗಳೂರು ಜಿಲ್ಲಾ ವೆಬ್‌ಸೈಟಿನಲ್ಲಿ ಅಳವಡಿಸಿ ಸಾರ್ವಜನಿಕರ ಗಮನಕ್ಕೆ ಪ್ರಚುರಪಡಿಸಿದೆ. ವೆಬ್‌ಸೈಟಿನಲ್ಲಿ ಲಭ್ಯವಾಗುವ ಮಾಹಿತಿಯನ್ನು ಅನುಬಂಧದಲ್ಲಿ ನಮೂದಿಸಿದೆ. ವೆಬ್‌ಸೈಟ್ ವಿಳಾಸ : **http://chickmagalur.nic.in**

ಸೆಕ್ಷನ್ 4(1)(ಬಿ) ಪ್ರಕಾರ ಜಿಲ್ಲಾ ಪಂಚಾಯಿತಿ, ಜಿಲ್ಲಾ ಆಯುಷ್ ಅಧಿಕಾರಿಗಳ ಕಛೇರಿ, ಚಿಕ್ಕಮಗಳೂರು ಇಲ್ಲಿನ ಮಾಹಿತಿ ಪಡೆಯಲು ಮಾಹಿತಿ ಹಕ್ಕು ಅಧಿನಿಯಮ – 2005 ಕೇಂದ್ರ ನಿಯಮ – 22ರ ಅನ್ವಯ ಕಛೇರಿಯ ಸಂಸ್ಥೆಯ ರಚನೆ, ಕಾರ್ಯಕ್ರಮಗಳು, ಕಛೇರಿ ಕಾರ್ಯಸೂಚಿಗಳನ್ನು ಹಾಗೂ ವಿವಿರಗಳನ್ನು ಸಾರ್ವಜನಿಕವಾಗಿ ಈ ಕೆಳಕಂಡಂತೆ ಪ್ರಚುರಪಡಿಸಿದೆ.

ಸೆಕ್ಷನ್ 4(1)(ಬಿ) ಪ್ರಕಾರ ಸಂಸ್ಥೆಯ ಹೆಸರು ಕಾರ್ಯಕ್ರಮಗಳು ಹಾಗೂ ಕರ್ತವ್ಯಗಳು:–
ಜಿಲ್ಲಾ ಪಂಚಾಯಿತಿ, ಜಿಲ್ಲಾ ಆಯುಷ್ ಅಧಿಕಾರಿಗಳ ಕಛೇರಿ, ಚಿಕ್ಕಮಗಳೂರು ಇದು ಸರ್ಕಾರಿ ಸಂಸ್ಥೆಯಾಗಿದ್ದು, ನಿರ್ದೇಶಕರು, ಆಯುಷ್ ನಿರ್ದೇಶನಾಲಯ, ಬೆಂಗಳೂರು ಹಾಗೂ ಜಿಲ್ಲಾ ಪಂಚಾಯಿತಿ, ಚಿಕ್ಕಮಗಳೂರು ಈ ಕಛೇರಿಗಳ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತದೆ.

ಈ ಕಛೇರಿಯ ಅಧೀನದಲ್ಲಿ ಬರುವ ಸರ್ಕಾರಿ ಆಯುಷ್ ಆಸ್ಪತ್ರೆ / ಚಿಕಿತ್ಸಾಲಯಗಳ ಮೇಲ್ವಿಚಾರಣೆ, ವೈದ್ಯರು / ಸಿಬ್ಬಂದಿಗಳಿಗೆ ವೇತನ / ವೇತನೇತರ ಅನುದಾನವನ್ನು ಬಿಡುಗಡೆ ಹಾಗೂ ಸರ್ಕಾರದ ಆದೇಶದನ್ವಯ ಶೇ.40 ಹಾಗೂ ಶೇ.60 ಭಾಗದ ಔಷಧಿಗಳನ್ನು ಹಾಗೂ ಕೇಂದ್ರ ಪುರಸ್ಕೃತ ಯೋಜನೆಯಡಿ ಸರಬರಾಜು ಮಾಡುವ ಔಷಧಿಗಳನ್ನು ಜಿಲ್ಲೆಯಲ್ಲಿ ಬರುವ ಸರ್ಕಾರಿ ಆಯುಷ್ ಆಸ್ಪತ್ರೆ / ಚಿಕಿತ್ಸಾಲಯಗಳಿಗೆ ಸರಬರಾಜು ಮಾಡುವುದು.

ಸೆಕ್ಷನ್ 4(1)(ಬಿ) (ii) ಅಧಿಕಾರಿಗಳ ಮತ್ತು ನೌಕರರ ಕರ್ತವ್ಯಗಳು:–

ಜಿಲ್ಲಾ ಆಯುಷ್ ಅಧಿಕಾರಿಗಳು:– ಈ ಕಛೇರಿಯ ಅಧೀನದಲ್ಲಿ ಬರುವ ಸರ್ಕಾರಿ ಆಯುಷ್ ಆಸ್ಪತ್ರೆ / ಚಿಕಿತ್ಸಾಲಯಗಳ ಮೇಲ್ವಿಚಾರಣೆ, ಕಟ್ಟಡಗಳ ನಿರ್ಮಾಣ ಮತ್ತು ದುರಸ್ತಿ ಕಾಮಗಾರಿಗಳ ಬಗ್ಗೆ ಕ್ರಮ ವಹಿಸುವುದು, ಅನಿರೀಕ್ಷಿತ ಬೇಟಿ ನೀಡುವುದು.

ಪ್ರಥಮ ದರ್ಜೆ ಸಹಾಯಕ:– ಕಛೇರಿ ದೈನಂದಿನ ಕಾರ್ಯಗಳನ್ನು ನಿರ್ವಹಿಸುವುದು ಹಾಗೂ ಆಯುಷ್ ಅಧಿಕಾರಿಗಳು ವಹಿಸುವ ಎಲ್ಲಾ ಕರ್ತವ್ಯಗಳನ್ನು ನಿರ್ವಹಿಸುವುದು.

ಸೆಕ್ಷನ್ 4(1)(ಬಿ) (iii) ಪ್ರಕಾರ ಮೇಲ್ವಿಚಾರಣೆ ಮತ್ತು ಹೊಣೆಗಾರಿಕೆಯ ಮಾರ್ಗಗಳು ಸೇರಿದಂತೆ ತೀರ್ಮಾನ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಅನುಸರಿಸುವ ಕಾರ್ಯ ವಿಧಾನಗಳು:–

ಜನ ಪ್ರತಿನಿಧಿಗಳಿಂದ, ಸಾರ್ವಜನಿಕರಿಂದ, ಮೇಲಾಧಿಕಾರಿಗಳಿಂದ ಹಾಗೂ ಸರ್ಕಾರಗಳಿಂದ, ನ್ಯಾಯಾಲಯದಿಂದ ಬರುವಂತಹ ಎಲ್ಲಾ ಕಾಗದ ಪತ್ರಗಳನ್ನು ಜಿಲ್ಲಾ ಆಯುಷ್ ಅಧಿಕಾರಿಗಳುರವರ ಗಮನಕ್ಕೆ ತಂದು ರಿಜಿಸ್ಟರಿನಲ್ಲಿ ನಮೂದಿಸಿಕೊಳ್ಳಲಾಗುವುದು. ತುರ್ತು ಕಾಗದ ಪತ್ರಗಳನ್ನು ಆಧ್ಯತೆಯ ಮೇರೆಗೆ ಕಛೇರಿ ಟಿಪ್ಪಣಿಯನ್ನು ವಿಷಯ ನಿರ್ವಾಹಕರು ಮಂಡಿಸುತ್ತಾರೆ.

ವಿಷಯ ನಿರ್ವಾಹಕರು ಪತ್ರಗಳನ್ನು ಕಡತದಲ್ಲಿ ಅಡಕವಿರಿಸಿ ಟಿಪ್ಪಣಿಯೊಂದಿಗೆ ಜಿಲ್ಲಾ ಆಯುಷ್ ಅಧಿಕಾರಿಗಳ ಅಭಿಪ್ರಾಯದೊಂದಿಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಕಡತವನ್ನು ಮಂಡಿಸುತ್ತಾರೆ. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ದತ್ತ ಅಧಿಕಾರದನ್ವಯ ಕ್ರಮ ಕೈಗೊಳ್ಳುತ್ತಾರೆ.

ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳುವ ಸಂದರ್ಭದಲ್ಲಿ ಶಿಕ್ಷಣ ಸ್ಥಾಯಿ ಸಮಿತಿಯ ಹಾಗೂ ಜಿಲ್ಲಾ ಪಂಚಾಯಿತಿ ಸರ್ವ ಸದಸ್ಯರ ಸಭೆಯಲ್ಲಿ ಅನುಮೋದನೆ ಪಡೆದು ಕ್ರಮ ವಹಿಸಲಾಗುವುದು.

ಸೆಕ್ಷನ್ 4(1)(ಬಿ) (iv) ಪ್ರಕಾರ ಕಾರ್ಯಗಳನ್ನು ನೆರವೇರಿಸುವಲ್ಲಿ ರೂಢಿಸಿಕೊಂಡಿರುವ ವಿಧಾನಗಳು:–

- ಈ ಕಛೇರಿಯಲ್ಲಿ ಸ್ವೀಕರಿಸಿದ ಕಾಗದ ಪತ್ರಗಳನ್ನು ವಹಿಯಲ್ಲಿ ನಮೂದಿಸಿ ಮೇಲಾಧಿಕಾರಿಗಳಿಗೆ ಮಂಡಿಸುವುದು.
- ಕಛೇರಿ ನಿಯಮಾವಳಿಗಳ ಪ್ರಕಾರ ಗರಿಷ್ಠ 15 ದಿನಗಳ ಒಳಗಾಗಿ ಕಾಗದ ಪತ್ರಗಳನ್ನು ಮಂಡಿಸುವ ವ್ಯವಸ್ಥೆ.
- ಸಾರ್ವಜನಿಕರಿಂದ ಬಂದ ಕುಂದುಕೊರತೆಗಳ ಮನವಿಯನ್ನು ಪರಿಶೀಲಿಸಿ ಸಂಬಂಧಪಟ್ಟ ಕಛೇರಿಗಳಿಂದ ವರದಿ ಪಡೆದು ಅವಶ್ಯಕವಿದ್ದಲ್ಲಿ ಜಿಲ್ಲಾ ಪಂಚಾಯಿತಿಗೆ ಮನವಿ ಸಲ್ಲಿಸಿ ಸಂಬಂಧಪಟ್ಟ ಮನವಿಗಳಿಗೆ ಸೂಕ್ತ ಹಿಂಬರಹ ನೀಡುವುದು.
- ಇಲಾಖೆಯ ಕಛೇರಿಗಳಿಂದ ವರದಿ ಪಡೆಯಲು ಕಾಲಾವಧಿ ನಿಗದಿಪಡಿಸುವುದು.
- ಇಲಾಖೆಯ ವೈದ್ಯರುಗಳಿಗೆ ಮಾಸಿಕ ಸಭೆಗಳನ್ನು ಏರ್ಪಡಿಸಿ ಅತಿಥಿ ಉಪನ್ಯಾಸಕರಿಂದ ಚಿಕಿತ್ಸೆಗೆ ಸಂಬಂಧಪಟ್ಟ ಮಾಹಿತಿ ಹಾಗೂ ಇತರೆ ಮಾಹಿತಿಗಳನ್ನು ನೀಡುವುದು.

ಸೆಕ್ಷನ್ 4(1)(ಬಿ) (v) ಪ್ರಕಾರ ಕಾರ್ಯ ನಿರ್ವಹಣೆಯಲ್ಲಿ ಅನುಸರಿಸಲಾಗುವ ಹಾಗೂ ಪಾಲನೆ ಮಾಡುವ ನೀತಿ ನಿಯಮಗಳು ಕೈಪಿಡಿ ಹಾಗೂ ದಾಖಲೆಗಳು:–

- ಕೆ.ಸಿ.ಎಸ್.ಆರ್ ನಿಯಾಮವಳಿ
- ಸರ್ಕಾರ ಹಾಗೂ ಇಲಾಖೆಯ ಮೇಲಧಿಕಾರಿಗಳ ಸುತ್ತೋಲೆ ಹಾಗೂ ಆದೇಶಗಳು.
- ಜಿಲ್ಲಾ ಪಂಚಾಯಿತಿ ಆದೇಶಗಳು.

ಸೆಕ್ಷನ್ 4(1)(ಬಿ) (vi) ಪ್ರಕಾರ ಕಛೇರಿಯ ನಿಯಂತ್ರಣದಲ್ಲಿರುವ ದಾಸ್ತಾವೇಜುಗಳ ಪ್ರವರ್ಗಗಳ ವಿವರ ಪಟ್ಟಿ:–

| ಇಲಾಖೆಯ ಹೆಸರು | ಶಾಖೆ | ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ | ಸಾರ್ವಜನಿಕ ಮಾಹಿತಿ ಅಧಿಕಾರಿ | ಮೇಲ್ಮನವಿ ಪ್ರಾಧಿಕಾರ |
|---|---|---|---|---|
| ಆಯುಷ್ ಇಲಾಖೆ | ಜಿಲ್ಲಾ ಆಯುಷ್ ಅಧಿಕಾರಿಗಳ ಕಛೇರಿ, | – | ಜಿಲ್ಲಾ ಆಯುಷ್ ಅಧಿಕಾರಿಗಳು | ಮುಖ್ಯ ಕಾರ್ಯನಿರ್ವಾಹಕ |

| | | | | |
|---|---|---|---|---|
| | ಚಿಕ್ಕಮಗಳೂರು | | | ಅಧಿಕಾರಿಗಳು |

**ಸೆಕ್ಷನ್ 4(1)(ಬಿ) (vii) ಪ್ರಕಾರ ಕಾರ್ಯ ನೀತಿಯ ರಚನೆ ಅಥವಾ ಅದರ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸಾರ್ವಜನಿಕರೊಡನೆ ಸಮಾಲೋಚಿಸಲು ಅಥವಾ ಅವರ ಪ್ರಾತಿನಿಧ್ಯವಿರುವಂತೆ ಮಾಡಲು ಇರುವಂತ ವ್ಯವಸ್ಥೆ:–**

**ಯಾವುದು ಇರುವುದಿಲ್ಲ**

**ಸೆಕ್ಷನ್ 4(1)(ಬಿ) (viii) ಪ್ರಕಾರ ಮಂಡಳಿಗಳು ಪರಿಷತ್‌ಗಳು ಸಮಿತಿಗಳು ಅಥವಾ ಇತರೆ ನಿಕಾಯಗಳು ಅದರ ಸಲಹೆಯ ಉದ್ದೇಶಕ್ಕಾಗಿ ರಚಿತವಾದ ಇಬ್ಬರು ಅಥವಾ ಹೆಚ್ಚು ವ್ಯಕ್ತಿಗಳನ್ನೊಳಗೊಂಡ ಮಂಡಳಿಗಳ ಪರಿಷತ್‌ಗಳ ಮತ್ತು ಇತರೆ ನಿಕಾಯಗಳು ಸಭೆಗಳು ಸಾವಜನಿಕರಿಗೆ ಮುಕ್ತವಾಗಿ ಇರುತ್ತವೆಯೇ ಅಥವಾ ಅಂಥ ಸಭೆಗಳು ನಡವಳಿಗಳು ಸಾರ್ವಜನಿಕರಿಗೆ ದೊರಕುತ್ತವೆಯೇ ಎಂಬುವುದರ ವಿವರ:–**

**ಯಾವುದು ಇರುವುದಿಲ್ಲ**

**ಸೆಕ್ಷನ್ 4(1)(ಬಿ) (ix) ಪ್ರಕಾರ ಅಧಿಕಾರಿಗಳ ಮತ್ತು ನೌಕರರ ವಿವರ:–**

| ಹುದ್ದೆಯ ವಿವರ | ಮಂಜೂರಾದ ಹುದ್ದೆಗಳ ಸಂಖ್ಯೆ | ಪ್ರಸ್ತುತ ಕೆಲಸ ನಿರ್ವಹಿಸುತ್ತಿರುವ ಸಂಖ್ಯೆ |
|---|---|---|
| ಜಿಲ್ಲಾ ಆಯುಷ್ ಅಧಿಕಾರಿಗಳು | **01** | **01** |
| ಸಹಾಯಕ ಆಡಳಿತಾಧಿಕಾರಿಗಳು | **01** | **00** |
| ಕಛೇರಿ ಅಧೀಕ್ಷಕರು | **01** | **00** |
| ಪ್ರ.ದ.ಸ | **01** | **01** |
| ದ್ವಿ.ದ.ಸ ಕಮ್ ಕಂಪ್ಯೂಟರ್ ಆಪರೇಟರ್ | **02** | **00** |
| ಗ್ರೂಪ್–ಡಿ ನೌಕರರು | **01** | **01** |

**ಸೆಕ್ಷನ್ 4(1)(ಬಿ) (x) ಪ್ರಕಾರ ಪಡೆಯುವ ಸೇವೆಯು ಅದರ ಪ್ರತಿಯೊಬ್ಬ ಅಧಿಕಾರಿ ಮತ್ತು ನೌಕರರು ಪಡೆಯುವ ತಿಂಗಳ ವೇತನ ಕರ್ನಾಟಕ ನಾಗರೀಕ ಸೇವಾ ನಿಯಮಗಳು: 1957ರ ನಿಯಮ ದಿ: 31/03/2019 ರ ಅಂತ್ಯಕ್ಕೆ ಇದ್ದಂತೆ :–**

| ಕ್ರ.ಸಂ | ಪದನಾಮ | ಪದನಾಮ ಅಧಿಕಾರಿ/ನೌಕರರ ಹೆಸರು | ಪಡೆಯುವ ವೇತನ |
|---|---|---|---|
| **1** | ಜಿಲ್ಲಾ ಆಯುಷ್ ಅಧಿಕಾರಿಗಳು | ಡಾ॥ ಗೀತಾ ಎಸ್ | **106142** |
| **2** | ಪ್ರ.ದ.ಸ | ಮಂಜುನಾಥ ಹೆಚ್ ಈ | **31425** |
| **3** | ಗ್ರೂಪ್ – ಡಿ | ಚಂದ್ರಮ್ಮ | **21286** |

## ಸೆಕ್ಷನ್ 4(1)(ಬಿ) (xi) ಪ್ರಕಾರ ಅನುದಾನ ಹಂಚಿಕೆ ಯೋಜನೆಗಳ ವಿವರಗಳು ಬಿಡುಗಡೆ ಹಣ ಖರ್ಚಿನ ವಿವರ:-

| ಕ್ರ. ಸಂ. | ಕಾರ್ಯಕ್ರಮ ಹಾಗೂ ಲೆಕ್ಕಶೀರ್ಷಿಕೆ | ಸಂಕ್ಷಿಪ್ತ ವಿವರ | ಮೊತ್ತ (ಲಕ್ಷಗಳಲ್ಲಿ) |
|---|---|---|---|
| | ಲೆಕ್ಕ ಶೀರ್ಷಿಕೆ: 2210-00-105-0-38 | | |
| | ಮುಂದುವರೆದ ಕಾಮಗಾರಿಗಳು | | |
| 1 | ಜಿಲ್ಲಾ ಆಯುಷ್ ಕಛೇರಿ, ಚಿಕ್ಕಮಗಳೂರು, ಚಿಕ್ಕಮಗಳೂರು ತಾ॥ | ಜಿಲ್ಲಾ ಆಯುಷ್ ಅಧಿಕಾರಿಗಳ ನೂತನ ಕಛೇರಿ ಕಟ್ಟಡ ಕಾಮಗಾರಿಗಾಗಿ | 26.50 |
| 2 | ಜಿಲ್ಲಾ ಆಯುಷ್ ಕಛೇರಿ, ಚಿಕ್ಕಮಗಳೂರು, ಚಿಕ್ಕಮಗಳೂರು ತಾ॥ | ಜಿಲ್ಲಾ ಆಯುಷ್ ಅಧಿಕಾರಿಗಳ ಕಛೇರಿ ನಿವೇಶನಕ್ಕೆ ನೂತನ ಕಾಂಪೌಂಡ್ ಕಾಮಗಾರಿಗಾಗಿ | 4.00 |
| | ಹೊಸ ಕಾಮಗಾರಿಗಳು | | |
| 1 | ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ, ಸಿಂಗಟಗೆರೆ, ಕಡೂರು ತಾ॥ | ಚಿಕಿತ್ಸಾಲಯದ ಕಟ್ಟಡಕ್ಕೆ  ನೀರಿನ ತೊಟ್ಟಿ ಮತ್ತು ಸಿಂಟೆಕ್ಸ್ ಹಾಗೂ ನೀರೆತ್ತುವ ಪಂಪ್ ಅಳವಡಿಸುವ ಹಾಗೂ ಸುಣ್ಣಬಣ್ಣ ಕಾಮಗಾರಿಗಾಗಿ | 1.50 |
| 2 | ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ, ಕಲ್ಕೆರೆ, ಕಡೂರು ತಾ॥ | ಚಿಕಿತ್ಸಾಲಯದ ಕಟ್ಟಡಕ್ಕೆ ದುರಸ್ತಿ ಮತ್ತು ಸುಣ್ಣಬಣ್ಣ ಕಾಮಗಾರಿಗಾಗಿ | 0.50 |
| 3 | ಸರ್ಕಾರಿ ಪ್ರಕೃತಿ ಚಿಕಿತ್ಸಾಲಯ, ಮಲ್ಲೇಶ್ವರ, ಕಡೂರು ತಾ॥ | ಚಿಕಿತ್ಸಾಲಯದ ಕಟ್ಟಡಕ್ಕೆ ನೂತನ ಕಾಂಪೌಂಡ್ ಮತ್ತು ಗೇಟ್, ಕಬ್ಬಿಣದ ಕಿಟಕಿಗಳ ಅಳವಡಿಕೆ, ಧ್ವಜಸ್ತಂಭ ಹಾಗೂ ಸುಣ್ಣಬಣ್ಣ ಕಾಮಗಾರಿಗಾಗಿ | 2.00 |
| 4 | ಸರ್ಕಾರಿ ಆಯುರ್ವೇದ ಆಸ್ಪತ್ರೆ, ಕಡೂರು, ಕಡೂರು ತಾ॥ | ಆಸ್ಪತ್ರೆಯ ಕಾಂಪೌಂಡ್ ರಿಪೇರಿ ಮತ್ತು ಗೇಟ್ ಅಳವಡಿಕೆ, ರ್‍ಯಾಂಪ್, ಫಾರ್ಮಸಿ ಕೊಠಡಿ ಒಳರೋಗಿಗಳ ಕೊಠಡಿಗೆ ಬಾಗಿಲು ನಿರ್ಮಾಣ ಹಾಗೂ ಸುಣ್ಣಬಣ್ಣ ಕಾಮಗಾರಿಗಾಗಿ | 3.00 |
| 5 | ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ, ಅಂತರಘಟ್ಟೆ, ಕಡೂರು ತಾ॥ | ಚಿಕಿತ್ಸಾಲಯದ ನೆಲಕ್ಕೆ ಟೈಲ್ಸ್ ಅಳವಡಿಕೆ ಹಾಗೂ ದುರಸ್ತಿ ಮತ್ತು ಸುಣ್ಣಬಣ್ಣ ಕಾಮಗಾರಿಗಾಗಿ | 1.50 |
| 6 | ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ, ದೇವವೃಂದ, ಮೂಡಿಗೆರೆ ತಾ॥ | ಚಿಕಿತ್ಸಾಲಯದ ಆವರಣಕ್ಕೆ ಕಾಂಕ್ರೀಟ್ ನಿರ್ಮಾಣ ಮತ್ತು ನೀರಿನ ವ್ಯವಸ್ಥೆ ಕಾಮಗಾರಿಗಾಗಿ | 1.50 |
| 7 | ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ, ಮೇಲಿನಹುಲುವತ್ತಿ, ಚಿಕ್ಕಮಗಳೂರು ತಾ॥ | ಚಿಕಿತ್ಸಾಲಯದ ದುರಸ್ತಿ, ಸುಣ್ಣಬಣ್ಣ ಕಾಮಗಾರಿಗಾಗಿ | 1.50 |
| 8 | ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ, ಅಂಬಳೆ, ಚಿಕ್ಕಮಗಳೂರು ತಾ॥ | ಚಿಕಿತ್ಸಾಲಯಕ್ಕೆ ಔಷಧಿ ಇಡಲು ಕಡಪ ಕಲ್ಲಿನ ಸ್ಲ್ಯಾಬ್‌ಗಳು ಮತ್ತು ಹೊರ ರೋಗಿಗಳು ಕುಳಿತುಕೊಳ್ಳಲು ಕಡಪ ಕಲ್ಲಿನ ಸ್ಲ್ಯಾಬ್‌ಗಳು ಅಳವಡಿಕೆ | 1.50 |
| 9 | ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ, ಕೆರೆಕಟ್ಟೆ, ಶೃಂಗೇರಿ ತಾ॥ | ಚಿಕಿತ್ಸಾಲಯದ ಕಿಟಕಿ ಬಾಗಿಲುಗಳು ಮತ್ತು ಕಟ್ಟಡ ದುರಸ್ತಿ, ಎಲೆಕ್ಟ್ರಿಕಲ್ ವೈರಿಂಗ್, ಮತ್ತು ಸುಣ್ಣಬಣ್ಣ ಕಾಮಗಾರಿಗಾಗಿ | 2.00 |
| 10 | ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ, ಕಿಗ್ಗಾ, ಶೃಂಗೇರಿ ತಾ॥ | ಚಿಕಿತ್ಸಾಲಯದ ಕಾಂಪೌಂಡ್ ಏರಿಸುವ ಹಾಗೂ ಸುಣ್ಣಬಣ್ಣ ಕಾಮಗಾರಿಗಾಗಿ | 1.50 |
| 11 | ಸರ್ಕಾರಿ ಆಯುರ್ವೇದ ಚಿಕಿತ್ಸಾಲಯ, ನಾರ್ವೆ, ಕೊಪ್ಪ ತಾ॥ | ಚಿಕಿತ್ಸಾಲಯದ ನೂತನ ಕಾಂಪೌಂಡ್ ಹಾಗೂ ಗೇಟ್ ನಿರ್ಮಾಣ ಕಾಮಗಾರಿಗಾಗಿ | 1.00 |
| | ಒಟ್ಟು | | 48.00 |

ಸೆಕ್ಷನ್ 4(1)(ಬಿ) (xii) ಪ್ರಕಾರ ಸಹಾಯಧನ ಕಾರ್ಯಕ್ರಮಗಳ ಅನುಷ್ಠಾನ ಹಾಗೂ ಅವುಗಳಿಗಾಗಿ ನಿಗದಿಗೊಳಿಸಿದ ಅನುದಾನ ಮತ್ತು ಫಲಾನುಭವಿ ಅನುದಾನ ಮತ್ತು ಫಲಾನುಭವಿಗಳ ವಿವರ:–

ಈ ಕಛೇರಿಗೆ ಸಹಾಯಧನ ಕಾರ್ಯಕ್ರಮಗಳಿಗಾಗಿ ಯಾವುದೇ ಅನುದಾನ ನಿಗದಿಗೊಳಿಸಿರುವುದಿಲ್ಲ ಹಾಗೂ ಯಾವುದೇ ಫಲಾನುಭವಿಗಳು ಇರುವುದಿಲ್ಲ.

ಸೆಕ್ಷನ್ 4(1)(ಬಿ) (xiii) ಪ್ರಕಾರ ಸ್ವೀಕೃತವಾದ ರಿಯಾಯಿತಿಗಳು, ಪರವಾನಗಿಗಳು ಅಥವಾ ಮಂಜೂರು:–

ಯಾವುದು ಇರುವುದಿಲ್ಲ

ಸೆಕ್ಷನ್ 4(1)(ಬಿ) (xiv) ಪ್ರಕಾರ ಲಭ್ಯವಿರುವ ಅಥವಾ ಹೊಂದಿರುವ ಮಾಹಿತಿಗಳನ್ನು ವಿದ್ಯನ್ಮಾನಕ್ಕೆ ಅಳವಡಿಸಿರುವ ವಿವರಗಳು:–

ವೆಬ್‌ಸೈಟಿನಲ್ಲಿ ಅಳವಡಿಸಲಾಗಿದೆ. ಮಾಹಿತಿ ಪಡೆಯಲು ಮಹಿತಿ ಹಕ್ಕು ಅಧಿನಿಯಮ–2005 ಕೇಂದ್ರ ನಿಯಮ 22 ಸೆಕ್ಷನ್ 4(1)(a) ನಂತೆ ವೆಬ್‌ಸೈಟಿನಲ್ಲಿ ಅಳವಡಿಸಿದೆ. ವೆಬ್‌ಸೈಟ್ ವಿಳಾಸ:– **http://chickmagalur.nic.in**

ಸೆಕ್ಷನ್ 4(1)(ಬಿ) (xv) ಪ್ರಕಾರ ಸಾರ್ವಜನಿಕರ ಉಪಯೋಗಕ್ಕಾಗಿ ಗ್ರಂಥಾಲಯವನ್ನು ಅಥವಾ ವಾಚನಾಲಯವನ್ನು ನಿರ್ವಹಿಸುತ್ತಿದ್ದಲ್ಲಿ ಅದರ ಕೆಲಸದ ಸಮಯವನ್ನೊಳಗೊಂಡಂತೆ ಮಾಹಿತಿ ಪಡೆಯಲು ಸಾರ್ವಜನಿಕರಿಗೆ ಲಭ್ಯವಿರುವ ಸೌಲಭ್ಯಗಳ ವಿವರ:–

ಸಾರ್ವಜನಿಕರ ಉಪಯೋಗಕ್ಕಾಗಿ ಗ್ರಂಥಾಲಯ ಅಥವಾ ವಾಚನಾಲಯಗಳು ಯಾವುದು ಇರುವುದಿಲ್ಲ.

ಸೆಕ್ಷನ್ 4(1)(ಬಿ) (xvi) ಪ್ರಕಾರ ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಹೆಸರು, ಪದನಾಮ ಹಾಗೂ ಇತರೆ ವಿವರಗಳು:–

ಕರ್ನಾಟಕ ನಾಗರೀಕ ಸೇವಾ ನಿಯಮಗಳ – 1957ರ ನಿಯಮ 832 ರಂತೆ (ದಿ: 31/03/2019 ರಲ್ಲಿದ್ದಂತೆ)

| ಕ್ರ.ಸಂ | ವಿಭಾಗ | ಸಾರ್ವಜನಿಕ ಮಾಹಿತಿ ಅಧಿಕಾರಿಗಳು | ಸಹಾಯಕ ಮಾಹಿತಿ ಅಧಿಕಾರಿಗಳು | ಮೇಲ್ಮನವಿ ಪ್ರಾಧಿಕಾರಿಗಳು |
|---|---|---|---|---|
| 1 | ಜಿಲ್ಲಾ ಆಯುಷ್ ಅಧಿಕಾರಿಗಳ ಕಛೇರಿ | ಜಿಲ್ಲಾ ಆಯುಷ್ ಅಧಿಕಾರಿಗಳು, ಜಿಲ್ಲಾ ಆಯುಷ್ ಅಧಿಕಾರಿಗಳ ಕಛೇರಿ, ಚಿಕ್ಕಮಗಳೂರು | – | ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು |

ಜಿಲ್ಲಾ ಆಯುಷ್ ಅಧಿಕಾರಿಗಳು
ಚಿಕ್ಕಮಗಳೂರು